

ಕೇವರ್ ರಿಸರ್ಚ್ ಅಸೋಸಿಯೇಷನ್'ನವರು ಗುಹೆಗಳದ್ದೇ ತಾಣವಾಗಿರುವ ಅಭಯಾರಣ್ಯವನ್ನು ಒಳಗೊಂಡ ಕ್ವಾಂಗ್ ಬಿನ್ಹ್ ಪ್ರಾಂತ್ಯದಲ್ಲಿ ಗುಹೆಗಳ ಹುಡುಕಾಟ ನಡೆಸುತ್ತಿದ್ದರು. ಆ ನಂತರದಲ್ಲಿ ಈ ತಂಡದವರು ಸರಿಸುಮಾರು 350 ಗುಹೆಗಳನ್ನು ಇದೇ ಪ್ರಾಂತ್ಯದಲ್ಲಿ ಕಂಡುಹಿಡಿದು, ಅವುಗಳ ನೀಲನಕ್ಷೆ ತಯಾರಿಸಿದರು. ಆಗಲೇ ಒಬ್ಬೊಬ್ಬರಿ 94, 55, 25, 23 ಕಿ.ಮೀ. ಉದ್ದದ ಗುಹೆಗಳೂ ಇಲ್ಲಿವೆ ಎಂಬುದು ಜಗತ್ತಿನೆದುರು ಜಾಹೀರಾಯಿತು.

ಗುಹೆ ಸಂಶೋಧನೆಯಲ್ಲಿ ತೊಡಗಿದ್ದ ಹೋವರ್ಡ್ ಮತ್ತು ದೇಬ್ ಲಿಂಬರ್ಟ್ ಎಂಬುವವರಿಗೆ ಹೋ ಖಾನ್ಹ್‌ನ ಕಥೆ ಕಿವಿಗೆ ಬಿದ್ದು, ಅವನನ್ನು 2008ರಲ್ಲಿ ಭೇಟಿಯಾಗುತ್ತಾರೆ. ಬಳಿಕ ಕೆಲವು ಪ್ರಯತ್ನ ನಡೆದರೂ ಗುಹೆಯ ಒಳಗೆ ಸಾಕಷ್ಟು ದೂರ ಸಾಗಲಾಗಲಿಲ್ಲ. ಇದು ಸುಲಭದ ಹಾದಿಯಲ್ಲವೆಂದರಿತ ತಂಡ 2009ರಲ್ಲಿ ಜರ್ಮನ್‌ನ ಭೂಗೋಳ ತಜ್ಞೆ ಅನೆಟ್ಟೆ ಬೆಚರ್ ಸಹಾಯ ಪಡೆದು ಗುಹೆಯ ನೀಲನಕ್ಷೆ ತಯಾರಿಸುತ್ತಾರೆ. ಆಗ ಗುಹೆಗೆ ಸನ್ ಡೂಂಗ್ ಎಂದು ಹೆಸರಿಡಲಾಗುತ್ತದೆ. ಹೋ ಖಾನ್ಹ್ ಕೂಡ ಸನ್ ಡೂಂಗ್ ದಂಡಯಾತ್ರೆಯ ಭಾಗವಾಗುತ್ತಾನೆ. ರೋ (ಥೌಂಗ್) ಥುವಾಂಗ್ ನದಿ ಮೂರು ಮಿಲಿಯನ್ ವರ್ಷಗಳ ಹಿಂದೆ ಕೊರೆದಿರಬಹುದಾದ ಗುಹೆ ಇದು ಎಂದು ಈ ತಂಡ ಊಹಿಸಿದೆ.

ಫೆಬ್ರುವರಿಯಿಂದ ಆಗಸ್ಟ್‌ವರೆಗೆ ಪ್ರತಿ ವಾರಕ್ಕೆ ಒಂದು ಬಾರಿ 10 ಜನರ ತಂಡಕ್ಕೆ ಈ ಸಾಹಸಕ್ಕೆ ಅವಕಾಶ ಇದೆ. ಎರಡು ದಿನ ನಡೆದು ಗುಹೆಯ ಬಾಯಿಯನ್ನು ತಲುಪಿದ ಮೇಲೆ ಸಾಹಸಮಯ ಗುಹಾಪ್ರವೇಶ ಪ್ರಯಾಣ ಆರಂಭವಾಗುತ್ತದೆ. ಗುಹೆಯ ತುದಿ ತಲುಪಲು ಅಲ್ಲಲ್ಲಿ ತೆವಳಬೇಕು, ಬಂಡೆ ಏರಬೇಕು, ಹರಿಯುವ ನದಿಯಲ್ಲಿ ಈಜಬೇಕು, ಕೆಲವು ಕಡೆ ನದಿ ಹಾಯಬೇಕು, ತೆಪ್ಪದಲ್ಲಿ ಸಾಗಬೇಕು. ಗುಹೆ 5 ಕಿಲೋಮೀಟರ್ (3.1 ಮೈಲಿ) ಉದ್ದವಿದ್ದು, ನಯಾಗರ ಜಲಪಾತಕ್ಕಿಂತ ಮೂರು ಪಟ್ಟು ಎತ್ತರವಿದೆ. ಅಷ್ಟು ಎತ್ತರದ ಗುಹೆ ಚಾವಣಿಯಿಂದ ತೊಟ್ಟಿಕ್ಕುವ ನೀರು ಬೇರೆಯದೇ ಜಗತ್ತಿನ ಧ್ವನಿಯಂತೆ ಅಲ್ಲಿ ಪ್ರತಿಧ್ವನಿಸುತ್ತದೆ. ಜಲಜಶಿಲೆಯಿಂದಾದ 262 ಮೀಟರ್ ಎತ್ತರದ ಚೂಪುಗಲ್ಲು ವಿಸ್ಮಯಕಾರಿಯಾಗಿದೆ. ಇಷ್ಟೆಲ್ಲಾ ಸಾಹಸ ಮಾಡಿ ಗುಹೆಯ ತುದಿ ತಲುಪಿದರೆ ಅಲ್ಲಿ ಗುಹೆಯ ಚಾವಣಿ ಕಳಚಿ ಬಿದ್ದು, ಕಂದಕದಲ್ಲಿ ಮಳೆ ಕಾಡು ರೂಪ ತಾಳಿ, ಹೊಸದೊಂದು ಪ್ರಪಂಚ ಸೃಷ್ಟಿಸಿದೆ.

ಲಾವೋಸ್–ವಿಯೆಟ್ನಾಂ ಗಡಿಯ ಬಳಿಯಿರುವ ಈ ಗುಹೆಗೆ 2013ರಿಂದ ಜನರ ಪ್ರವೇಶಕ್ಕೆ ಅನುವು ಮಾಡಿಕೊಡಲಾಗಿದೆ. ಸ್ಥಳೀಯ ಅಡ್ವೆಂಚರ್ ಟೂರ್ ಕಂಪನಿ ಒಕಾಲಿಸ್‌ಗೆ ಮಾತ್ರ ಇಲ್ಲಿ ಪ್ರವಾಸಕ್ಕೆ ಅನುಮತಿ ನೀಡಲಾಗಿದೆ. ಪ್ರತಿ ಗುಹಾಯಾತ್ರೆಯಲ್ಲೂ ಇಬ್ಬರು ಗುಹೆ ತಜ್ಞರು, ಮೂರು ಗೈಡ್‌ಗಳು, ಇಬ್ಬರು ಬಾಣಸಿಗರು, ಇಬ್ಬರು ಅರಣ್ಯ ಸಂರಕ್ಷಕರು ಮತ್ತು ಗುಹೆ ಯಾತ್ರಿಕರ ಸಾಮಾನುಗಳನ್ನು ಪ್ರಯಾಣಕ್ಕೆ ಬೇಕಾದ ಅಗತ್ಯ ಸಾಮಾನುಗಳನ್ನು ಹೊತ್ತೊಯ್ಯಲು 20 ಜನರು ಇರುತ್ತಾರೆ.

ಈ ಗುಹೆಗಳಿರುವ ಕ್ವಾಂಗ್ ಬಿನ್ಹ್ ಪ್ರಾಂತ್ಯ ವಿಯೆಟ್ನಾಂ ದೇಶದ ಕಡುಬಡತನದ ಪ್ರಾಂತ್ಯವಾಗಿದೆ. ವಿಯೆಟ್ನಾಂ ಯುದ್ಧದ ಸಂದರ್ಭದಲ್ಲಿ ಬಾಂಬ್ ದಾಳಿಗೆ ಒಳಗಾಗಿದ್ದು, ಇನ್ನೂ ಇಲ್ಲಿ ಜೀವಂತ ಬಾಂಬ್‌ಗಳು ಇವೆ. ಈ ಪ್ರಾಂತ್ಯದ ಜನ ಜೀವಂತ ಬಾಂಬ್‌ಗಳನ್ನು ನಿಷ್ಕ್ರಿಯಗೊಳಿಸಿ, ಅವುಗಳನ್ನು ಬಂಡೆ ಒಡೆಯುವವರಿಗೆ ಡೈನಾಮೈಟ್ ರೂಪದಲ್ಲಿ ಕೊಡುತ್ತಾರೆ. ಬಾಂಬ್ ಸಿಡಿದಾಗ ಚದುರಿ ಬೀಳುವ ಲೋಹದ ತುಂಡುಗಳನ್ನು ಮಾರಿ ಹೊಟ್ಟೆ ಹೊರೆದುಕೊಳ್ಳುವ ಜನರೂ ಇದ್ದಾರೆ.

ಯಾವಾಗ ಸಾಹಸಮಯ ಗುಹೆ ಪ್ರವಾಸ ಆರಂಭವಾಯಿತೊ ಆಗಿನಿಂದ ಹಳ್ಳಿಯ ಜನರ ಮೊಗದಲ್ಲಿ ನಗುವರಳಿದೆ. ಹೋಂ ಸ್ಟೇಗಳು ಆರಂಭವಾಗಿವೆ. ಮೌಂಟೇನ್ ಬೈಕಿಂಗ್, ಚಾರಣ, ಕಯಾಕಿಂಗ್ ಇನ್ನಿತರ ಕ್ರೀಡೆಗಳನ್ನು ಸ್ಥಳೀಯರು ಆರಂಭಿಸಿದ್ದಾರೆ. ಈ ಮಧ್ಯೆ ವಿಯೆಟ್ನಾಂನ ಸನ್ ಗ್ರೂಪ್ ಎಂಬ ಕಂಪನಿ ಗುಹೆಯೊಳಗೆ ಒಂದು ತಾಸಿಗೆ 1000 ಜನರನ್ನು ಹೊತ್ತೊಯ್ಯಬಲ್ಲ ಕೇಬಲ್ ಕಾರ್ ಯೋಜನೆಯನ್ನು ಹಾಕಿಕೊಂಡಿತ್ತು. ಸರ್ಕಾರ ಇದಕ್ಕೆ 2015 ರಲ್ಲಿ ಒಪ್ಪಿಗೆ ಸಹ ನೀಡಿತ್ತು. ನಂತರ ಪರಿಸರವಾದಿಗಳು ಮತ್ತು ಯುನೆಸ್ಕೊದವರು ಈ ಯೋಜನೆಯನ್ನು ತಡೆದಿದ್ದಾರೆ.

ನಿಸರ್ಗದ ಬೆರಗನ್ನೂ, ಸುತ್ತಲಿನ ಪ್ರದೇಶದಲ್ಲಿ ಮನುಷ್ಯರ ಬಡತನವನ್ನೂ ಒಳಗೊಂಡಿರುವ ಈ ಗುಹೆಗಳನ್ನು ನೋಡಿಬರುವುದೆಂದರೆ ಬದುಕಿನ ಎರಡು ಅಂಚುಗಳನ್ನು ಮುಟ್ಟಿಬಂದಂತೆಯೇ ಸರಿ.

ಪ್ರತಿಕ್ರಿಯಿಸಿ: feedback@sudha.co.in






ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
ಗುರೂಜಿ ಮಹೇಶ್‌ಭಟ್

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನ್ನು ಸಾಧಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
"ಗುರೂಜಿ ಮಹೇಶ್‌ಭಟ್"
ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ
ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಗುರೂಜಿ ಮಹೇಶ್‌ಭಟ್
9686999517